ಹೂವು ನಕ್ಷೆಗಳಲ್ಲಿ ವಿನ್ಯಾಸ ಮಾಡಿದ ಈ ಫಲಕ ಈಗಲೂ ಹಳೆಯ ನೆನಪುಗಳನ್ನು ಕೆದಕುವ ಸಾಮರ್ಥ್ಯ ಹೊಂದಿತ್ತು. ಸುಷಮಾಳ ಕಾಲುಗಳು ಅತ್ತ ಸರಿದು ದೂಳಿನಲ್ಲಿ ಬಿದ್ದ ಆ ಫಲಕವನ್ನೆತ್ತಿ ಕೈಗಳಿಂದ ಒರೆಸಿ ಸ್ವಚ್ಛ ಮಾಡಿದಳು. ಅದರ ಮೇಲೆ ಬರೆದ ಅಕ್ಷರಗಳ ಮೇಲೆ ಆತ್ಮೀಯತೆಯಿಂದ ಬೆರಳನ್ನಿಟ್ಟಾಗ ಅವಳಿಗೆ ರಿಚಿ ಆಂಟಿಯ ಮನಸ್ಸಿನ – ಹೃದಯದ ಬಡಿತ ಕೇಳಿದಂತಾಯಿತು. ಅವಳ ಕಿವಿಗಳಲ್ಲಿ ಆಂಟಿಯ ಸ್ನೇಹಭರಿತ ಇಂಪಾದ ಧ್ವನಿ ಕೇಳಿದಂತಾಯಿತು. 'ಸುಷ್ ಡಿಯರ್, ಸುಷಿ ಡಾರ್ಲಿಂಗ್' ಅವಳನ್ನು ಆಂಟಿ ಸದಾ ಇದೇ ಪ್ರೀತಿಯ ಶಬ್ದಗಳಿಂದ ಕರೆಯುತ್ತಿದ್ದಳು.

ಸುಷಮಾಳ ಕಣ್ಣೆವೆಗಳು ಬಾಡಿದವು. ಅವಳು ಮಂತ್ರಮುಗ್ಧಳಾಗಿ ತನ್ನಲ್ಲಿಯೇ ಬಡಬಡಿಸತೊಡಗಿದಳು. 'ಆಂಟೀ ನಾನು ಈಗ ಬಂದಿದ್ದೇನೆ, ಅರ್ಧ ಶತಮಾನದ ನಂತರ ಬಂದಿದ್ದೀನಿ. ಈಗಲೂ ನೀವು ನನ್ನ ಸ್ಮೃತಿಸಂಪುಟದಲ್ಲಿ ಮೊದಲಿನಂತೆಯೇ ಇದ್ದೀರಿ. ನಿಮ್ಮನ್ನು ನನ್ನ ಜೀವಮಾನದಲ್ಲಿ ಮರೆಯಲು ಸಾಧ್ಯವಿಲ್ಲ.'

ಅದೇ ಹೊತ್ತಿಗೆ ಒಬ್ಬ ಕೆಲಸಗಾರ ತನ್ನ ಜೋಪಡಿಯಿಂದ ಹೊರಗೆ ಬಂದ. ಒಂದು ವಯಸ್ಸಾದ ಹೆಣ್ಣು ಮಗಳು ಅರ್ಧ ಮುರಿದುಬಿದ್ದ ಕಂಬಕ್ಕೊರಗಿ ನಿಂತು ತನ್ನಷ್ಟಕ್ಕೆ ಏನೋ ಬಡಬಡಿಸುತ್ತಿದ್ದುದನ್ನು ನೋಡಿದ. ಅವಳು ಭಾವವಿಹ್ವಲಳಾಗಿದ್ದುದು ತಿಳಿಯುತ್ತಿತ್ತು. ಅವಳನ್ನು ನೋಡಿ ಅವನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳೆದ್ದವು. ಸುಷಮಾ ಅವನನ್ನು ನೋಡಿದಳು. ಅವಳು ಅಲ್ಲಿ ನಿಲ್ಲದೆ ಭಾರವಾದ ಹೆಜ್ಜೆಗಳನ್ನಿಡುತ್ತ ರಸ್ತೆಗೆ ಬಂದು ಪಾರ್ಕಿನತ್ತ ಹೆಜ್ಜೆ ಹಾಕತೊಡಗಿದಳು. ಅವಳ ಮಾರ್ನಿಂಗ್ ವಾಕ್‌ನ ಇಚ್ಛೆ ಕಮರಿ ಹೋಗಿತ್ತು. ಅವಳು 'ರೆಚೆಲ್ ಕಾಟೇಜ್'ನ ಮುರಿಯದಿರುವ ಭಾಗ ಕಣ್ಣಿಗೆ ಕಾಣುವಂತೆ ಒಂದು ಬೆಂಚಿನ ಮೇಲೆ ಹೋಗಿ ಕುಳಿತುಕೊಂಡಳು. ಅವಳ ಕಣ್ಣೆದುರು ಹಿಂದಿನ ದೃಶ್ಯ ಬಂದು ನಿಂತಿತು. ಒಂದು ವಿಶಾಲ ಕಬ್ಬಿಣದ ಗೇಟ್, ಠೀವಿಯಿಂದ ನಿಂತ ಕಾವಲುಗಾರ, ತೋರಣದಂತೆ ಬಗ್ಗಿಸಿದ ಕಮಾನಿನ ಮೇಲೆ ಬೆಳೆದ ಲ್ಯಾವೆಂಡರ್ ಹೂವಿನ ಲತೆಗಳು, ಐವತ್ತು ಅಡಿ ಎಡಬದಿಗೆ ಸುಂದರ ರಥ ಶೈಲಿಯಲ್ಲಿ ಕಟ್ಟಿದ ಭವ್ಯ ಬಂಗಲೆ. ಅವಳಿಗೆ ಅನಿಸಿತು, ಬಂಗ್ಲೆಯಲ್ಲಿ ನಿಕ್ ಅಂಕಲ್ ಬಿಯರ್ ಗ್ಲಾಸ್ ಹಿಡಿದುಕೊಂಡು ನಿಂತಿದ್ದಾನೆ, ಯುದ್ಧದಿಂದ ಮರಳಿ ಬಂದ ಅವನ ಜೊತೆಗಾರರು ದೊಡ್ಡ ಖುಷಿಯ ದಿನ ಆಚರಿಸುವ ಸಂಭ್ರಮದಲ್ಲಿ ಆರ್ಗನ್ನಿನ ಸ್ವರಕ್ಕೆ ಸ್ವರ ಬೆರಸಿ ಹಾಡುತ್ತಿದ್ದಾರೆ. 'ಸಿಂಗಿಂಗ್ ಆಯಿ ಆಯಿ... ಇಪ್ಪಿ ಆಯಿ ಆಯಿ' ತನ್ನನ್ನು ಕಟ್ಟಾ ಇಂಗ್ಲಿಷಿನವಳು

